Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

( EXTRAORDINARY )
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं–1 | नई दिल्ली, सोमवार, मे 5 -1997 | वैशाख 15, 1919 (शक) | खन्ड–16 |
| No. 1 | New Delhi, Monday, May 5, 1997 | Vaishakha 15, 1919 (Saka) | Vol. 16 |
| ಸಂಖ್ಯೆ ೧ | ನವದೆಹಲಿ, ಸೋಮವಾರ, ಮೇ ೫, ೧೯೯೭ | ವೈಶಾಖ ೧೫, ೧೯೧೯ (ಶಕ) | ಸಂಪುಟ ೧೬ |


## Ministry of Law, Justice & Company Affairs

(Legislative Department)

New Delhi, December 25, 1995

ಕಾನೂನು, ನ್ಯಾಯ ಮತ್ತು ಕಂಪನಿ ವ್ಯವಹಾರಗಳ ಮಂತ್ರಾಲಯ

(ವಿಧಾಯೀ ಇಲಾಖೆ)

ನವದೆಹಲಿ, 25ನೇ ಡಿಸೆಂಬರ್ 1995

The Translation in Kannada of the following Acts, namely—(1) The Employers Liability Act, 1938 (2) The Drugs (Control) Act, 1950 (3) The Weekly Holiday Act, 1942 (4) The All India Council for Technical Education Act, 1987 (5) The Hindu Succession Act, 1956 (6) The Additional Duties of Excise (Textiles and Textile Articles) Act, 1978 (7) The Bureau of Indian Standerds Act, 1986 (8) The Provident Funds Act, 1925 and (9) The Indian Divorce Act, 1869 are hereby published under the authority of the President and shall be deemed to be authoritative texts thereof in Kannada under clause (a) of Section (2) of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳ, ಎಂದರೆ—(1) ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 (2) ಔಷಧ (ನಿಯಂತ್ರಣ) ಅಧಿನಿಯಮ, 1950 (3) ವಾರದ ರಜಾ ದಿನ ಅಧಿನಿಯಮ, 1942 (4) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅಧಿನಿಯಮ, 1987 (5) ಹಿಂದೂ ಉತ್ತರಾಧಿಕಾರ ಅಧಿನಿಯಮ, 1956 (6) ಅಧಿಕ ಉತ್ಪಾದನಾ ಶುಲ್ಕ (ಜವಳಿ ಮತ್ತು ಜವಳಿ ವಸ್ತು) ಅಧಿನಿಯಮ, 1978 (7) ಭಾರತೀಯ ಮಾನಕ ಸಂಸ್ಥೆ ಅಧಿನಿಯಮ, 1986 (8) ಭವಿಷ್ಯ ನಿಧಿ ಅಧಿನಿಯಮ, 1925 ಮತ್ತು (9) ಭಾರತ ವಿವಾಹ ವಿಚ್ಛೇದನ ಅಧಿನಿಯಮ, 1869— ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ (1973ರ 50) 2ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

**ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938**
**(1938ರ 24)**

[ಸೆಪ್ಟೆಂಬರ್ 24, 1938]

ಕೆಲಸಗಾರರಿಗೆ ಉಂಟಾದ ಕ್ಷತಿಗಳಿಗೆ ಸಂಬಂಧಿಸಿದ ಹಾನಿಪರಿಹಾರಕ್ಕಾಗಿ ಹೂಡಿರುವ ದಾವೆಗಳಲ್ಲಿ ಕೆಲವು ಪ್ರತಿವಾದಗಳನ್ನು ಎತ್ತಬಾರದೆಂದು ಘೋಷಿಸುವ ಅಧಿನಿಯಮ.

ಕೆಲಸಗಾರರಿಗೆ ಉಂಟಾದ ಕ್ಷತಿಗಳಿಗೆ ಸಂಬಂಧಿಸಿದ ಹಾನಿಪರಿಹಾರಕ್ಕಾಗಿ ಹೂಡಿರುವ ದಾವೆಗಳಲ್ಲಿ ಕೆಲವು ಪ್ರತಿವಾದಗಳನ್ನು ಎತ್ತಬಾರದೆಂದು ಘೋಷಿಸುವುದು ವಿಹಿತವಾಗಿರುವುದರಿಂದ ಇದನ್ನು ಈ ಮೂಲಕ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ನಿಯೋಜಕ ಹೊಣೆಗಾರಿಕೆ ಅಧಿನಿಯಮ, 1938 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಯಾವುದಾದರೂ ಇದ್ದ ಹೊರತು,–

(ಎ) "ಕೆಲಸಗಾರ" ಎಂದರೆ ಶಾರೀರಿಕ ಶ್ರಮದ ರೂಪದಲ್ಲಾಗಲಿ, ಲಿಪಿಕ ಕೆಲಸದ ರೂಪದಲ್ಲಾಗಲಿ ಅಥವಾ ಅನ್ಯಥಾ ಯಾವನೇ ನಿಯೋಜಕನೊಂದಿಗೆ ಸೇವೆಯ ಅಥವಾ ಉಮೇದುವಾರಿಕೆಯ ಕರಾರು ಮಾಡಿಕೊಂಡಿರುವ–ಕರಾರು ವ್ಯಕ್ತವಾದುದಾಗಿರಲಿ ಅಥವಾ ಇಂಗಿತವಾದುದಾಗಿರಲಿ ಅಥವಾ ಬಾಯಿಮಾತಿನದಾಗಿರಲಿ ಅಥವಾ ಬರಹರೂಪದ್ದಾಗಿರಲಿ, ಅಂಥ ಕರಾರಿನ ಮೇರೆಗೆ ಕೆಲಸ ಮಾಡುತ್ತಿರುವ ಯಾರೇ ವ್ಯಕ್ತಿ; ಮತ್ತು

(ಬಿ) "ನಿಯೋಜಕ" ಎಂಬುದು ವ್ಯಕ್ತಿಗಳ ಯಾವುದೇ ನಿಯಮವನ್ನು, ಅದು ನಿಗಮಿತವಾಗಿರಲಿ ಅಥವಾ ಇಲ್ಲದಿರಲಿ ನಿಯೋಜಕನ ಯಾರೇ ವ್ಯವಸ್ಥಾಪಕ ಏಜೆಂಟನನ್ನು ಮತ್ತು ಮೃತ ನಿಯೋಜಕನ ಕಾನೂನುಸಮ್ಮತ ಪ್ರತಿನಿಧಿಗಳನ್ನು ಒಳಗೊಳ್ಳುತ್ತದೆ ಮತ್ತು ಕೆಲಸಗಾರನು ಯಾರೊಡನೆ ಸೇವೆಯ ಅಥವಾ ಉಮೇದುವಾರಿಕೆಯ ಕರಾರನ್ನು ಮಾಡಿಕೊಂಡಿರುವನೋ ಆ ವ್ಯಕ್ತಿಯು ಇತರ ವ್ಯಕ್ತಿಗೆ ಕೆಲಸಗಾರನ ಸೇವೆಗಳನ್ನು ತಾತ್ಕಾಲಿಕವಾಗಿ ಎರವಲು ಕೊಟ್ಟಿರುವಲ್ಲಿ ಅಥವಾ ಮಜೂರಿಗೆ ಕೊಟ್ಟಿರುವಲ್ಲಿ, ಕೆಲಸಗಾರನು ಯಾರಿಗಾಗಿ ಕೆಲಸಮಾಡುತ್ತಿರುವನೋ ಅಂಥ ಇತರ ವ್ಯಕ್ತಿ ಎಂದು ಅರ್ಥ.

**3. ಕೆಲವು ಸಂದರ್ಭಗಳಲ್ಲಿ ಸಾಮಯಿಕ ನಿಯೋಜನೆಯ ಪ್ರತಿವಾದವನ್ನು ಪ್ರತಿಷೇಧಿಸತಕ್ಕದ್ದು.– ಕೆಲಸಗಾರನಿಗೆ.–**

(ಎ) ತನ್ನ ವ್ಯಾಪಾರಕ್ಕೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಅಥವಾ ಅದರಲ್ಲಿ ಉಪಯೋಗಿಸಲಾದ ಯಾವುದೇ ದಾರಿಯನ್ನು, ಯಾವುವೇ ಕಾಮಗಾರಿಗಳನ್ನು, ಯಂತ್ರೋಪಕರಣಗಳನ್ನು ಅಥವಾ ಸ್ಥಾವರವನ್ನು ಒಳ್ಳೆಯ ಮತ್ತು ಸುರಕ್ಷಿತವಾದ ಸ್ಥಿತಿಯಲ್ಲಿ ಇಡಲು ನಿಯೋಜಕನು ತಪ್ಪಿದ ಕಾರಣದಿಂದಾಗಿ, ಅಥವಾ ಅಂಥ ದಾರಿಯು, ಕಾಮಗಾರಿಗಳು, ಯಂತ್ರೋಪಕರಣಗಳು ಅಥವಾ ಸ್ಥಾವರವು ಒಳ್ಳೆಯ ಮತ್ತು ಸುರಕ್ಷಿತ ಸ್ಥಿತಿಯಲ್ಲಿ ಇರುವಂತೆ ನೋಡಿಕೊಳ್ಳುವುದಕ್ಕಾಗಿ ನಿಯೋಜಕನು ವಹಿಸಿಕೊಟ್ಟ ಮತ್ತು ಅವನ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ಹಾಗೆ ತಪ್ಪಿದ ಕಾರಣದಿಂದಾಗಿ; ಅಥವಾ

(ಬಿ) ನಿಯೋಜಕನ ಸೇವೆಯಲ್ಲಿದ್ದು ಯಾವುದೇ ಮೇಲ್ವಿಚಾರಣೆಯನ್ನು ತನಗೆ ವಹಿಸಲಾಗಿರುವ ಯಾರೇ ವ್ಯಕ್ತಿಯು ಅಂಥ ಮೇಲ್ವಿಚಾರಣೆಯನ್ನು ನಿರ್ವಹಿಸುವಲ್ಲಿನ ನಿರ್ಲಕ್ಷ್ಯದ ಕಾರಣದಿಂದಾಗಿ; ಅಥವಾ

(ಸಿ) ನಿಯೋಜಕನ ಸೇವೆಯಲಿರುವ ಮತ್ತು ಯಾರ ಆದೇಶಗಳನ್ನು ಅಥವಾ ನಿರ್ದೇಶನಗಳನ್ನು ಕ್ಷತಿಯುಂಟಾದ ಕಾಲದಲ್ಲಿ ಕೆಲಸಗಾರನು ಪಾಲಿಸಲೇಬೇಕಾಗಿತ್ತೋ ಮತ್ತು ಹಾಗೆ ಪಾಲಿಸಿದನೋ ಮತ್ತು ಹಾಗೆ ಪಾಲಿಸಿದುದರಿಂದಾಗಿ ಕ್ಷತಿಯುಂಟಾಯಿತೋ ಆ ಯಾರೇ ವ್ಯಕ್ತಿಯ ನಿರ್ಲಕ್ಷ್ಯದ ಕಾರಣದಿಂದಾಗಿ; ಅಥವಾ

(ಡಿ) ನಿಯೋಜಕನ ಸೇವೆಯಲ್ಲಿರುವ ಯಾರೇ ವ್ಯಕ್ತಿಯು,–

(i) ಆ ವ್ಯಕ್ತಿಯ ಕರ್ತವ್ಯಗಳನ್ನು ಸಾಮಾನ್ಯವಾಗಿ ನಿರ್ವಹಿಸುವಲ್ಲಿ; ಅಥವಾ

(ii) (ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಲಾದ ಮತ್ತು ಯಾವುದೇ ಪ್ರಾಧಿಕಾರವು ಅನುಮೋದಿಸಬೇಕಾಗಿರುವ ಮತ್ತು ಅದು ಹಾಗೆ ಅನುಮೋದಿತವಾದ ನಿಯಮವಲ್ಲದ ಅಥವಾ ಉಪವಿಧಿಯಲ್ಲದ) ನಿಯೋಜಕನ ಯಾವುದೇ ನಿಯಮವನ್ನು ಅಥವಾ ಉಪವಿಧಿಯನ್ನು ಪಾಲಿಸುವಲ್ಲಿ; ಅಥವಾ

(iii) ನಿಯೋಜಕನು ಈ ಬಗ್ಗೆ ಅಧಿಕಾರವನ್ನು ಪ್ರತ್ಯಾಯೋಜಿಸಿದ ಇತರ ಯಾರೇ ವ್ಯಕ್ತಿಯು ಕೊಟ್ಟ ನಿರ್ದಿಷ್ಟ ಅನುದೇಶಗಳನ್ನು ಪಾಲಿಸುವಲ್ಲಿ

– ಮಾಡಿದ ಕಾರ್ಯದ ಅಥವಾ ಲೋಪದ ಕಾರಣದಿಂದಾಗಿ, ದೈಹಿಕ ಕ್ಷತಿಯು ಉಂಟಾಗಿರುವಲ್ಲಿ, ಅ ಕ್ಷತಿಗೆ ಸಂಬಂಧಿಸಿ ಕೆಲಸಗಾರನು ಅಥವಾ ಅವನು ಮರಣ ಹೊಂದಿದ ಸಂದರ್ಭದಲ್ಲಿ, ಹಕ್ಕುದಾರನಾದ ಯಾರೇ ವ್ಯಕ್ತಿಯು ಹಾನಿಪರಿಹಾರಕ್ಕಾಗಿ ಹೂಡಿದ ದಾವೆಯು, ಕ್ಷತಿಯುಂಟಾದ ಕಾಲದಲ್ಲಿ ಆ ಕೆಲಸಗಾರನು ನಿಯೋಜಕನ ಕೆಲಸಗಾರನಾಗಿದ್ದನೆಂಬ, ಅವನ ಸೇವೆಯಲ್ಲಿದ್ದನೆಂಬ ಅಥವಾ ಅವನ ಕೆಲಸದಲ್ಲಿ ನಿರತನಾಗಿದ್ದನೆಂಬ ಕಾರಣಮಾತ್ರದಿಂದಲೇ ವಿಫಲವಾಗತಕ್ಕದ್ದಲ್ಲ.

**3ಎ. ಕರಾರಿನ ಮೂಲಕ ವಿಮೋಚನೆ.–** ಸೇವೆಯ ಅಥವಾ ಉಮೇದುವಾರಿಕೆಯ ಕರಾರಿನಲ್ಲಿ ಅಥವಾ ಅದಕ್ಕೆ ಪಾರ್ಶ್ವಿಕವಾದ ಒಪ್ಪಂದದಲ್ಲಿ ಇರುವ ಯಾವುದೇ ಉಪಬಂಧವು, ನಿಯೋಜಿತನಾದ ಅಥವಾ ಉಮೇದುವಾರನಾಗಿ ತೆಗೆದುಕೊಳ್ಳಲಾದ ವ್ಯಕ್ತಿಗೆ ಅವನೊಡನೆ ಸಾಮಯಿಕ ನಿಯೋಜನೆಯಲ್ಲಿರುವ ವ್ಯಕ್ತಿಗಳ ನಿರ್ಲಕ್ಷ್ಯದಿಂದ ಉಂಟಾದ ದೈಹಿಕ ಕ್ಷತಿಗೆ ಸಂಬಂಧಿಸಿ ನಿಯೋಜಕನ ಯಾವುದೇ ಹೊಣೆಗಾರಿಕೆಯನ್ನು ಹೊರತುಪಡಿಸಿದ ಅಥವಾ ಪರಿಮಿತಗೊಳಿಸುವ ಪರಿಣಾಮವನ್ನು ಹೊಂದಿರುವಷ್ಟರ ಮಟ್ಟಿಗೆ, ಶೂನ್ಯವಾಗತಕ್ಕದ್ದು.

**4. ಪೂರ್ಣ ತಿಳಿವಳಿಕೆಯಿಲ್ಲದೆ ಅಪಾಯವನ್ನು ಹೊತ್ತುಕೊಳ್ಳಲಾಗಿದೆಯೆಂದು ಭಾವಿಸತಕ್ಕದ್ದಲ್ಲ.–** ಹಾನಿ ಪರಿಹಾರಕ್ಕಾಗಿ ಹೂಡಿದ ಅಂಥ ಯಾವುದೇ ದಾವೆಯಲ್ಲಿ, ಕೆಲಸಗಾರನಿಗೆ ಅಪಾಯದ ಬಗ್ಗೆ ಪೂರ್ಣವಾಗಿ ವಿವರಿಸಲಾಗಿತ್ತೆಂದು ಮತ್ತು ಅದನ್ನು ಕೆಲಸಗಾರನು ಅರ್ಥಮಾಡಿಕೊಂಡಿದ್ದನೆಂದು ಹಾಗೂ ಕೆಲಸಗಾರನು ಸ್ವಇಚ್ಛೆಯಿಂದಲೇ ಅದನ್ನು ಹೊತ್ತುಕೊಂಡನೆಂದು ನಿಯೋಜಕನು ರುಜುವಾತುಮಾಡಿದ ಹೊರತು, ನಿಯೋಜನೆಗೆ ಸೇರಿದ ಯಾವುದೇ ಅಪಾಯವನ್ನು ಕೆಲಸಗಾರನು ಹೊತ್ತುಕೊಂಡಿದ್ದಾನೆಂದು ಭಾವಿಸತಕ್ಕದ್ದಲ್ಲ.

**5. ಉಳಿಸುವಿಕೆ.–** ಈ ಅಧಿನಿಯಮದಲ್ಲಿರುವುದು ಯಾವುದೂ, ಹಾನಿಪರಿಹಾರಕ್ಕಾಗಿ ಹೂಡಲಾದ ಅಂಥ ಯಾವುದೇ ದಾವೆಯಲ್ಲಿ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿದ್ದ ಸಿವಿಲ್ ನ್ಯಾಯಾಲಯದ ಯಾವುದೇ ಡಿಕ್ರಿಯ ಅಥವಾ ಆದೇಶದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.